# ನವಿಲುಗನ್ನಡಿ

- ನವೆಂಬರ್ ಸಂಚಿಕೆಯಲ್ಲಿ ವಿಕ್ರಮ ವಿಸಾಜಿ ಅವರು ಕೆ.ವಿ. ನಾರಾಯಣ ಅವರೊಂದಿಗೆ ನಡೆಸಿರುವ ಮಾತುಕತೆ ಮತ್ತೆ ಮತ್ತೆ ಓದಬೇಕಾದ ಸಂದರ್ಶನ. ಬಹಳ ಮಹತ್ವದ ಪ್ರಶ್ನೆಗಳಿಗೆ ಕೆವಿಎನ್ ಬಹಳ ಮಹತ್ವದ ಮಾತುಗಳನ್ನು ಆಡಿದ್ದಾರೆ, ಚರ್ಚೆಗಳನ್ನು ಬೆಳೆಯಿಸಿದ್ದಾರೆ. ಮಾರ್ಕ್ಸ್‌ವಾದದಿಂದ ದೇಶೀವಾದದ ಕಡೆಗೆ ಅವರ ವಿಮರ್ಶೆಯ ಪಯಣ ಇದೆ. ನಮ್ಮ ಸಾಹಿತ್ಯ ಮೀಮಾಂಸೆಯ ಪರಿಕರಗಳನ್ನು ಅನಾಮತ್ತಾಗಿ ಅನ್ವಯಿಸುವುದರಿಂದ ಆಗುವ ಅನಾಹುತಗಳನ್ನು ಅವರು ಬಲ್ಲರು. ಮೀಮಾಂಸೆ ತಿಳಿವಳಿಕೆಯಾಗಿರಬೇಕು ಅಷ್ಟೆ. ನಮ್ಮ ಆಳವಾದ, ವಿಸ್ತಾರವಾದ ಓದಿನ ತಿಳಿವಳಿಕೆಯ ಹಿನ್ನೆಲೆಯಲ್ಲಿ ಕೃತಿಯನ್ನು ಸೂಕ್ಷ್ಮವಾಗಿ ಓದುತ್ತ ಅದರ ಒಡಲಿನಿಂದಲೇ ಟೂಲ್ಸ್‌ಗಳನ್ನು ಪಡೆಯಬೇಕು ಎಂಬುದು ನನಗೆ ಮುಖ್ಯ ಅನಿಸಿತು. 'ಶೇಕ್ಸ್‌ಪಿಯರ್ ನನಗೆ ರೆಲೆವೆಂಟ್ ಆಗೋದು ಅವನ ಕಾಲದ ಅರ್ಥಕ್ಕಾಗಿ ಅಲ್ಲ, ನನ್ನ ಕಾಲದ ಅರ್ಥಕ್ಕಾಗಿ', 'ಯಾವುದು ಗಟ್ಟಿ ಬರಹ ಆಗ್ತದೆ ಅಂದ್ರೆ ನನ್ನನ್ನ ಆವರಿಸಿಕೊಂಡಾಗ ಮಾತ್ರ', 'ಸಾಹಿತ್ಯ ಕೃತಿ ನಮ್ಮ ವ್ಯಕ್ತಿತ್ವದ ಒಂದು ವಿಸ್ತರಣೆ ಆಗಬೇಕು' – ಇಂಥ ಅನೇಕ ಹೊಳಹುಗಳಿಂದಾಗಿ ಇದು ನನಗೆ ಮಹತ್ವದ ಸಂವಾದ ಅನಿಸುತ್ತದೆ. ಮರೆವಿಗೆ ಸಂದಿದ್ದ ಕನ್ನಡ ನಾಡಿನ ಇತಿಹಾಸವನ್ನು ಕಟ್ಟಿಕೊಟ್ಟ ಮಹನೀಯರಾದ ನಾ.ಶ್ರೀ. ರಾಜಪುರೋಹಿತರನ್ನು ಕುರಿತ ದುಷ್ಯಂತ ನಾಡಗೌಡರ ಲೇಖನ ಕನ್ನಡ ರಾಜ್ಯೋತ್ಸವ ಸಂದರ್ಭದಲ್ಲಿ ಸಾಮಯಿಕವೂ ಸೂಕ್ತವೂ ಆಗಿದೆ.

**ಮಲ್ಲಿಕಾರ್ಜುನ ಹಿರೇಮಠ, ಧಾರವಾಡ**

- ಕೆ.ವಿ. ನಾರಾಯಣರ ಸಂದರ್ಶನದಲ್ಲಿ ಅವರು ಕುಮಾರವ್ಯಾಸನನ್ನು ಸ್ಮರಿಸಿದ ಸಂದರ್ಭ ಮಂದಹಾಸ ಮೂಡಿಸಿತು. ಮಾಹಿತಿ ತಂತ್ರಜ್ಞಾನದಿಂದ ಅನವಶ್ಯಕ ವಿಷಯಗಳು ನಮ್ಮ ಮಡಲಿಗೆ ಬಂದು ಬೀಳುತ್ತಿರುವದರಿಂದ, ಲೋಕಗ್ರಹಿಕೆಯ ವಿಧಾನ ನಮ್ಮ ಕಲಿಕೆಯಿಂದ ಮೊಂಡಾಗುತ್ತಿವೆ ಎನ್ನುವ ಕಾಳಜಿ ನಿಜವಾದುದು.

**ರವಿ ಯಲಿಗಾರ ಮುನವಳ್ಳಿ**

- ನವೆಂಬರ್ ಸಂಚಿಕೆಯ ಮುಖಪುಟ ಒಕ್ಕಣಿಕೆಯೇ ಈ ಸಂಚಿಕೆಯ ವಿಶೇಷತೆಯನ್ನು ವಿವರಿಸಿದಂತಿದೆ. 'ನಮಗೆ ನಾವೇ ಕನ್ನಡಿ' ಸಾಂಸ್ಕೃತಿಕ ಕನ್ನಡಿಯ ಅರ್ಥಪೂರ್ಣ ಸಂಪಾದಕೀಯ.

**ಶಂಕರನಾರಾಯಣ ಭಟ್, ಮಾಡಗೇರಿ**

- ಎಲ್ಲಾ ಸಂಚಿಕೆಗಳು ತುಂಬ ಸೊಗಸಾಗಿ ಬರುತ್ತಿವೆ. ಅದರಲ್ಲೂ ಮಾತುಕತೆ, ಪ್ರಬಂಧಗಳು, ವಿಶೇಷ ಲೇಖನಗಳು ವಿದ್ವತ್ ಪೂರ್ಣವಾಗಿವೆ.

**ಅನಂತರಾಮಯ್ಯ, ಬೆಂಗಳೂರು**

- ಮಿತ್ರಾ ವೆಂಕಟ್ರಾಜ್ ಅವರ 'ಮಿನುಗೆಲೆ ಮಿನುಗೆಲೆ ನಕ್ಷತ್ರ' ಅರ್ಥಪೂರ್ಣವಾಗಿದೆ. ಬಾಲ್ಯದ ಕಹಿಘಟನೆಗಳು ಮನದಾಳದಲ್ಲಿ ಆಳವಾಗಿ ಅಚ್ಚೊತ್ತಿ ಮುಂದಿನ ಬದುಕಿನ ಮೇಲೆ ಗಾಢವಾಗಿ ಪರಿಣಾಮ ಬೀರುವ ಬಗೆಯನ್ನು ಅವರು ಕಥೆಯಲ್ಲಿ ಸೊಗಸಾಗಿ ಚಿತ್ರಿಸಿದ್ದಾರೆ.

**ಶಾಂತಲಾ ರಾಜಗೋಪಾಲ್, ಬೆಂಗಳೂರು**

- ಶಶಿಕುಮಾರ್ ಅವರ ಐವತ್ತರ ಕರ್ನಾಟಕದ ಹೊತ್ತಿನಲ್ಲಿ ನೂರರ ಕನ್ನಡ ವಿಮರ್ಶೆಯ 'ಸಂಪ್ರದಾಯಭಂಗ' ವಿಶೇಷ ಲೇಖನಕ್ಕೆ ಪ್ರತಿಕ್ರಿಯೆ. ಸಾಹಿತ್ಯದ ಉದ್ದೇಶ ಸಮಾಜದ ಚಿತ್ರಣ ಮತ್ತು ಅಭಿವ್ಯಕ್ತಿ. ಕಾಲ ಬದಲಾದಂತೆ ಸಾಹಿತ್ಯವೂ ವಿಕಸನ ಹೊಂದುತ್ತ ಬಂದಿದ್ದು ಶ್ಲಾಘನೀಯ, ಈ ವಿಕಸನದ ಹೆಜ್ಜೆಗಳನ್ನು ಸಂಪ್ರದಾಯಭಂಗ ಎಂದು ಕರೆಯುವುದು ಎಷ್ಟು ಸರಿ?.

**ಎನ್. ಅಕ್ಷಯಕುಮಾರ್, ಧಾರವಾಡ**

- 'ಕಾಡಿಗೆ ಕಣ್ಣು' ಕಲೀಮ್ ಉಲ್ಲಾ ಅವರ ಅಂಕಣ ಕಾಡಿನ ಜೀವಸಂಕುಲದ ಬದುಕು–ಬವಣೆ–ಸಂಭ್ರಮವನ್ನು ಸೊಗಸಾಗಿ ಚಿತ್ರಿಸುತ್ತಿದೆ.

**ಅನುಪಮಾ ಸುರೇಶ್, ಧಾರವಾಡ**